
ಡನ್ನೋನ ಸಾಹಸ ಕಥೆಗಳು

19

ನಿಕೋಲಾಯ್ ನೋಸೋವ್

ಜೀವಂತ ಲೇಖಕನ ಭೇಟಿ



RADUGA PUBLISHERS

ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೊವ್

18

ಜೀವಂತ ಲೇಖಕನ ಭೆಟ್ಟಿ

ಚಿತ್ರಗಳು: ಬೋರಿಸ್ ನಿಕೋಲೊವ್

ಕನ್ನಡಕ್ಕೆ ಪ್ರಭಾಕರ ನಾನಾವಟಿ



RADUGA PUBLISHERS
MOSCOW



ಲೇಖಕ, ಸ್ಲಿಕ್, ತನ್ನ ಅಧ್ಯಯನ ಕೊಠಡಿಯ ತೆರೆದ ಕಿಟಕಿಯ ಬಳಿ ಕೈಗಳನ್ನು ಮಡಚಿಕೊಂಡು ನಿಂತು, ದೂರದಲ್ಲಿ ನೋಡುತ್ತಿದ್ದನು. ಅವನ ಉದ್ದನೆಯ ಕೂದಲು ಹಿಂದಕ್ಕೆ ಸವರಲ್ಪಟ್ಟಿತ್ತು. ಅವನ ದಪ್ಪ ಕಪ್ಪು ಹುಬ್ಬುಗಳು ಮೂಗಿನ ಮೇಲ್ಭಾಗದಲ್ಲಿ ಒಂದಕ್ಕೊಂದು ಸೇರಿಕೊಂಡಿದ್ದವು. ಇದರಿಂದ ಅವನ ಮುಖಕ್ಕೆ ಆಳವಾದ ಏಕಾಗ್ರತೆಯ ಭಾವ ಮೂಡಿತ್ತು, ಮೂವರು ಸ್ನೇಹಿತರು ಕೋಣೆಯೊಳಗೆ ಬಂದಾಗ ಅವನು ಸ್ವಲ್ಪವೂ ಅಲುಗಾಡಲಿಲ್ಲ. ಪ್ರೆಟ್ಜೆಲ್ ಜೋರಾಗಿ ಅವನನ್ನು ಎಬ್ಬಿಸಿ ಬೆಂಡಮ್ ಮತ್ತು ಟ್ವಿಸ್ಟಮ್‌ರನ್ನು ಪರಿಚಯಿಸಿದನು. ಅವರು ಸೋಲ್ಡರಿಂಗ ಆಯರ್ನ್‌ಕ್ಕಾಗಿ ಬಂದಿದ್ದಾರೆಂದು ವಿವರಿಸಿದನು, ಆದರೆ ಸ್ಲಿಕ್ ಮಾತ್ರ ತನ್ನ ತಲೆಯೊಳಗೆ ಬಹಳ ವೇಗವಾದ ಮತ್ತು ಚತುರವಾದ ಆಲೋಚನೆಯೊಂದು ಓಡಾಡುತ್ತಿದ್ದು, ಅದರ ಬಾಲವನ್ನು ಹಿಡಿಯಲು ತನ್ನ ಕೈಲಾದಷ್ಟು ಪ್ರಯತ್ನಿಸುತ್ತಿರುವವನಂತೆ ಕಿಟಕಿಯಿಂದ ಹೊರಗೆ ನೋಡುತ್ತಲೇ ಇದ್ದನು. ಪ್ರೆಟ್ಜೆಲ್ ತನ್ನ ಭುಜಗಳನ್ನು ಕುಗ್ಗಿಸಿ, ಬೆಂಡಮ್ ಮತ್ತು ಟ್ವಿಸ್ಟಮ್‌ರನ್ನು ನೋಡಿ ಹೇಳಿದನು.

'ನಾನು ನಿಮಗೆ ಏನು ಹೇಳಿದ್ದೆ?" ಕೊನೆಗೆ ಸ್ಲಿಕ್ ತಾನು ಈಗಷ್ಟೇ ಎಚ್ಚರಗೊಂಡವನಂತೆ ತನ್ನನ್ನು ತಾನೇ ಅಲುಗಾಡಿಸಿಕೊಂಡು, ಹಿಂದಕ್ಕೆ ತಿರುಗಿದನು.

“ಹೇಗಿದ್ದೀರಿ,” ಅವನು ಮೃದುವಾದ ಎಳೆದು ಮಾತನಾಡುವ ಧ್ವನಿಯಲ್ಲಿ ಕೇಳಿದನು. “ನನ್ನನ್ನು ಕ್ಷಮಿಸಿ, ನನ್ನ ಸ್ನೇಹಿತರೇ, ನಾನು... ಎರ್... ನಿಜವಾಗಿ ಹೇಳುವುದಾದರೆ, ಒಳಮುಖನಾಗಿದ್ದೆ — ನನ್ನ ಕಲ್ಪನೆಯಿಂದ ಉನ್ನತ ಲೋಕಗಳಿಗೆ ಕೊಂಡೊಯ್ಯಲ್ಪಟ್ಟಿದ್ದೆ... ನಾನು ಸ್ಲಿಕ್,” ಎಂದು ಅವನು ಪರಿಚಯ ಮಾಡಿಕೊಳ್ಳುವಂತೆ ಹೇಳಿ, ಬೆಂಡಮ್‌ನ ಕಡೆಗೆ ಕೈ ಚಾಚಿದನು.
ಬೆಂಡಮ್ ಅವನ ಕೈಯನ್ನು ಹಿಡಿದನು; ಅದು ಬಹಳ ಮಟ್ಟಿಗೆ ಮೀನು ಕೇಕ್‌ದಂತಿತ್ತು, ಮತ್ತು ತನ್ನ ಹೆಸರನ್ನು ಹೇಳಿದನು.
“ಸ್ಲಿಕ್,” ಎಂದು ಲೇಖಕನು ಮತ್ತೆ ಹೇಳುತ್ತಾ ಟ್ವಿಸ್ಟಮ್‌ನ ಕಡೆಗೆ ಕೈ ಚಾಚಿದನು.
“ಟ್ವಿಸ್ಟಮ್,” ಎಂದು ಎರಡನೆಯವನು ಹೇಳುತ್ತಾ ಆ ಮೀನು ಕೇಕ್‌ನ್ನು ಕುಲುಕಿದನು.
“ಸ್ಲಿಕ್,” ಎಂದು ಲೇಖಕನು ಮೂರನೆಯ ಬಾರಿ ಹೇಳುತ್ತಾ ಪ್ರೆಟ್ಜೆಲ್‌ನ ಕಡೆಗೆ ಕೈ ಚಾಚಿದನು.
“ಆದರೆ ನೀನು ನಾನು ಪರಿಚಯದವರು,” ಎಂದು ಪ್ರೆಟ್ಜೆಲ್ ಹೇಳಿದನು.




“ಆಹಾ, ಹಾಗಾದರೆ ಇದು ಪ್ರೆಟ್ಸೆಲ್,” ಎಂದನು ಸ್ಲಿಕ್. “ನಿನ್ನನ್ನು ನೋಡಲು ಸಂತೋಷವಾಗಿದೆ. ನಿಜವಾಗಿಯೂ ಬಹಳ ಸಂತೋಷವಾಗಿದೆ. ಕುಳಿತುಕೊಳ್ಳಿ, ಸ್ನೇಹಿತರೇ.”

ಅವರೆಲ್ಲರೂ ಕುಳಿತುಕೊಂಡರು.

“ಹಾಗಾದರೆ ನಮ್ಮ ಆ ಟ್ರ್ಯಾಪ್ಸ್‌ನನ್ನು ನೀವು ಭೇಟಿಯಾಗಿದ್ದೀರಾ, ಹೌದೇ?” ಎಂದು ಸ್ಲಿಕ್ ಕೇಳಿದ. ಈ ಪ್ರಶ್ನೆಯ ಮೂಲಕ, ತನ್ನನ್ನು ಯಾವ ಯಾವ ಲೋಕಗಳಿಗೆ ಕರೆದೊಯ್ಯಲಾಗಿದ್ದರೂ, ಪ್ರೆಟ್ಜೆಲ್‌ನ ಮಾತುಗಳನ್ನು ಅವನು ಕೇಳಿದ್ದಾನೆಂಬುದನ್ನು ತೋರಿಸಿದಂತಾಯಿತು. “ಅವನು ತನ್ನ ಮಡಚುವ ಕುರ್ಚಿಗಳು ಮತ್ತು ಮೇಜುಗಳನ್ನು ನಿಮಗೆ ತೋರಿಸಿರಬಹುದಲ್ಲವೇ?” ಎಂದು ಅವನು ನಗುತ್ತಾ ಹೇಳಿದನು.


ಬೆಂಡಮ್ ತಲೆಯಾಡಿಸಿದನು. ಸ್ಲಿಕ್‌ನ ಬಾಯಿಯ ಮೂಲೆಗಳಲ್ಲಿ ವ್ಯಂಗ್ಯಭರಿತ ನಗು ಇತ್ತು. ಅದು ಅವನಿಗೆ ಸಂತೋಷವನ್ನು ನೀಡುವಂತೆ ಅವನು ತನ್ನ ಮೊಣಕಾಲುಗಳನ್ನು ಉಜ್ಜಿಕೊಂಡನು.

“ಆ ಸಂಶೋಧಕರ ಜನರೇ ಒಂದು ವಿಚಿತ್ರ ಬಳಗ,” ಎಂದನು. “ಈಗ, ಆ ಮಡಚುವ ಮೇಜುಗಳು ಮತ್ತು ಕುರ್ಚಿಗಳು, ಆ ರಹಸ್ಯ ಕಪಾಟುಗಳು ಮತ್ತು ಕೆಳಗೆ ಬೀಳುವ ಜೋಳಿಗೆಗಳೆಲ್ಲವನ್ನು ಯಾರಿಗಾದರೂ ಏಕೆ ಬೇಕಾಗಬಹುದು ಎಂದು ಭಾವಿಸುತ್ತೀರಿ? ಎದ್ದ ಕ್ಷಣವೇ ಮೇಲಕ್ಕೆ ಹಾರಿಹೋಗದ ಸಾಮಾನ್ಯ ಕುರ್ಚಿಯಲ್ಲಿ ಕುಳಿತುಕೊಳ್ಳುವುದನ್ನೂ, ಹಾಸಿಗೆಯೊಳಗೆ ಹೋದ ಕ್ಷಣವೇ ಮೇಲಕ್ಕೆ ಮತ್ತು ಕೆಳಕ್ಕೆ ಹೋಗದ ಹಾಸಿಗೆಯಲ್ಲಿ ಮಲಗುವುದನ್ನೂ ನಾನು ಇಷ್ಟಪಡುತ್ತೇನೆ.



“ಯಾರು ನನ್ನನ್ನು ಇಂತಹ ಹಾಸಿಗೆಯಲ್ಲಿ ಮಲಗಿಸಬಲ್ಲರು? ನಾನು ಬಯಸದಿದ್ದರೆ ಯಾರು ನನ್ನನ್ನು ಹಾಗೆ ಒತ್ತಾಯ ಮಾಡಬಲ್ಲರು? ನನಗೆ ಯಾವುದೇ ಆಸೆಯೇ ಇಲ್ಲದಿದ್ದರೆ ಯಾರು ನನ್ನನ್ನು ಹಾಗೆ ಮಾಡಬಲ್ಲರು?"
‘ಯಾರೂ ಮಾಡಲಾರರು,” ಎಂದ ಪ್ರೆಟ್ಜೆಲ್. ‘'ಟ್ಯಾಪ್ಸ್ ಒಬ್ಬ ಸಂಶೋಧಕ, ಆದ್ದರಿಂದ ಅವನು ಯಾವಾಗಲೂ ಸುಧಾರಣೆಗಳ ಬಗ್ಗೆ ಯೋಚಿಸಲು ಪ್ರಯತ್ನಿಸುತ್ತಿರುತ್ತಾನೆ. ಅವನು ಯಾವಾಗಲೂ ಯಶಸ್ವಿಯಾಗುವುದಿಲ್ಲ, ಆದರೆ ಅವನ ಕೆಲವು ಸಂಶೋಧನೆಗಳು ಬಹಳ ಉಪಯುಕ್ತವಾಗಿವೆ. ಅವನು ಒಬ್ಬ ಚತುರ ಕೆಲಸಗಾರ.‘
‘ಅವನು ಹಾಗೆ ಇಲ್ಲ ಎಂದು ನಾನು ಹೇಳುವುದಿಲ್ಲ," ಎಂದು ಸ್ಲಿಕ್ ಮಧ್ಯೆ ಬಾಯಿ ಹಾಕಿ ಮಾತಾಡಿದನು. ‘ಇದಕ್ಕೆ ವಿರುದ್ಧವಾಗಿ, ಅವನು ಹಾಗೆಯೇ ಇದ್ದಾನೆ ಎಂದು ನಾನು ಹೇಳುತ್ತೇನೆ. ಉದಾಹರಣೆಗೆ, ಅವನು ನನಗೆ ಅತ್ಯುತ್ತಮ ಮಾತುಕತೆ ಯಂತ್ರವೊಂದನ್ನು ತಯಾರಿಸಿದ್ದಾನೆ.‘
‘ಮಾತುಕತೆ ಯಂತ್ರವೇ?"
‘ಮಾತನ್ನಾಡುವ ಯಂತ್ರ. ಹರಟೆ ಪೆಟ್ಟಿಗೆ. ಇಲ್ಲಿ, ನೋಡಿ.‘
ಸ್ಲಿಕ್ ತನ್ನ ಅತಿಥಿಗಳನ್ನು ಒಂದು ಮೇಜಿನ ಬಳಿಗೆ ಕರೆದೊಯ್ದನು; ಅದರ ಮೇಲೆ ಒಂದು ಚಿಕ್ಕ ಉಪಕರಣ ಇತ್ತು.





“ಅದಕ್ಕೆ ಪೆಟ್ಟಿಗೆ, ಅಥವಾ ಚೀಲ, ಅಥವಾ ನೀವು ಏನೆಂದು ಕರೆಯಲು ಬಯಸುತ್ತೀರೋ ಅದು, ಒಂದು ಬದಿಯಿಂದ ತೆರೆಯಬಹುದು. ಅದನ್ನು ತೆರೆದು ಕೆಲವು ಮಾತುಗಳನ್ನು ಹೇಳಿ, ನಂತರ ಈ ಬಟನನ್ನು ಒತ್ತಿದರೆ, ಈ ಮಾತುಗಾರ ಪೆಟ್ಟಿಗೆ ನೀನು ಹೇಳಿದ್ದನ್ನೆಲ್ಲಾ ಮತ್ತೆ ಹೇಳುತ್ತದೆ. ಪ್ರಯತ್ನಿಸು,” ಎಂದು ಸ್ಲಿಕ್ ಬೆಂಡಮ್‌ಗೆ ಹೇಳಿದನು.

ಬೆಂಡಮ್ ಬಾಗಿ ಆ ಚಿಕ್ಕ ಪೆಟ್ಟಿಗೆಯೊಳಗೆ ಹೇಳಿದನು:

“ಬೆಂಡಮ್, ಬೆಂಡಮ್, ಟ್ವಿಸ್ಟಮ್, ಟ್ವಿಸ್ಟಮ್.”

“ಮತ್ತು ಪ್ರೆಟ್ಜೆಲ್,” ಎಂದು ಪ್ರೆಟ್ಜೆಲ್ ಸೇರಿಸಿದನು.

ಸ್ಲಿಕ್ ಒಂದು ಬಟನನ್ನು ಒತ್ತಿದನು. ಯಂತ್ರವು ಗಡುಸಾದ ಧ್ವನಿಯಲ್ಲಿ ಪುನರಾವರ್ತಿಸಿತು:

“ಬೆಂಡಮ್, ಬೆಂಡಮ್, ಟ್ವಿಸ್ಟಮ್, ಟ್ವಿಸ್ಟಮ್. ಮತ್ತು ಪ್ರೆಟ್ಜೆಲ್,”

“ನಿನಗೆ ಮಾತನಾಡುವ ಯಂತ್ರ ಏಕೆ ಬೇಕು?” ಎಂದು ಟ್ವಿಸ್ಟಮ್ ಕೇಳಿದನು.

“ಏಕೆಂದರೆ, ಇಂತಹ ಯಂತ್ರವಿಲ್ಲದೆ ಒಬ್ಬ ಬರಹಗಾರನು ಬಹುತೇಕ ಅಸಹಾಯಕನಾಗಿರುತ್ತಾನೆ,” ಎಂದು ಸ್ಲಿಕ್ ಹೇಳಿದನು. “ನಾನು ಇದನ್ನು ಜನರ ಮನೆಗಳಲ್ಲಿ ಇಡುತ್ತೇನೆ, ಮತ್ತು ಅವರು ಹೇಳುವ ಪ್ರತಿಯೊಂದನ್ನೂ ಇದು ದಾಖಲಿಸುತ್ತದೆ. ನಾನು ಮಾಡಬೇಕಾದದ್ದು ಆ ಮಾತುಗಳನ್ನು ಬರೆದುಕೊಳ್ಳುವುದು ಅಷ್ಟೇ, ಒಂದು ಚಿಕ್ಕ ಕಥೆ ಅಥವಾ ಒಂದು ಕಾದಂಬರಿಯೇ ಸರಿ, ಮುದ್ರಣಕ್ಕೆ ಎಲ್ಲವೂ ಸಿದ್ಧ.”



“ಎಷ್ಟು ಸರಳ ಮತ್ತು ಸುಲಭವಿದೆ!” ಎಂದು ಟ್ವಿಸ್ಟಮ್ ಹೇಳಿದನು. “ ಕೆಲವರು ಮಾತ್ರ ಬರಹಗಾರನಿಗೆ ಮೊದಲು ಕಥಾವಸ್ತು ಗೊತ್ತಿರಬೇಕು ಎಂದು ಸುಮ್ಮಸುಮ್ಮನೆ ಹೇಳುತ್ತಾರೆ!”

“ಅಸಂಬದ್ಧ ಮಾತು!” ಎಂದು ಸ್ಲಿಕ್ ತಿರಸ್ಕಾರದಿಂದ ಹೇಳಿದನು. “ಪುಸ್ತಕಗಳಲ್ಲಿ ಅವರು ಹಾಗೆ ಹೇಳುತ್ತಾರೆ. ಆದರೆ ಎಲ್ಲ ಕಥಾವಸ್ತುಗಳನ್ನೂ ಈಗಾಗಲೇ ಯೋಚಿಸಿಬಿಟ್ಟಿರುವಾಗ, ನೀನೇ ಒಂದು ಕಥಾವಸ್ತುವನ್ನು ಯೋಚಿಸಲು ಪ್ರಯತ್ನಿಸು. ನಿನ್ನ ತಲೆಗೆ ಬರುವ ಯಾವುದೇ ಕಥಾವಸ್ತು ಬೇರೆಯವರದ್ದಾಗಿ ಬಂದಿರದಿರುವುದಿಲ್ಲ. ಇದೊಂದು ಆಧುನಿಕ ವಿಧಾನ — ನೇರವಾಗಿ ಪ್ರಕೃತಿಯಿಂದಲೇ ನಿನ್ನ ವಸ್ತುವನ್ನು ತೆಗೆದುಕೊಳ್ಳುವುದು — ಕಚ್ಚಾ ರೂಪದಲ್ಲೇ ಎಂದು ಹೇಳಬಹುದು. ಮತ್ತು ಹೀಗೆ ಮಾಡುವಾಗ, ಯಾವ ಬರಹಗಾರನೂ ಹಿಂದೆಂದೂ ಯೋಚಿಸದ ಯಾವುದನ್ನಾದರೂ ನೀನು ಕಂಡುಹಿಡಿಯಬಹುದು. ಯಾರಿಗೆ ಗೊತ್ತು.”

“ಆದರೆ ಎಲ್ಲರೂ ತಮ್ಮ ಮನೆಯಲ್ಲಿ ನಿನ್ನ ಈ ಹರಟೆ ಪೆಟ್ಟಿಗೆಯನ್ನು ಇಡಲು ಒಪ್ಪಿಕೊಳ್ಳುವುದಿಲ್ಲವಲ್ಲ,” ಎಂದು ಬೆಂಡಮ್ ಹೇಳಿದನು.

“ನಾನು ಅವರನ್ನು ಮೋಸಗೊಳಿಸುತ್ತೇನೆ,” ಎಂದು ಸ್ಲಿಕ್ ಹೇಳಿದನು. “ನೋಡಿದಂತೆ, ಇದು ಸಾಮಾನ್ಯವಾದ ಒಂದು ಚಿಕ್ಕ ಚೀಲದಂತೆ ಕಾಣುತ್ತದೆ. ನಾನು ಸ್ನೇಹಿತರನ್ನು ಭೇಟಿ ಮಾಡಲು ಹೋದಾಗ ಅದನ್ನು ನನ್ನೊಂದಿಗೆ ತೆಗೆದುಕೊಂಡು ಹೋಗುತ್ತೇನೆ, ಮತ್ತು ಮನೆಗೆ ಹಿಂದಿರುಗುವಾಗ ಅದನ್ನು ಮೇಜಿನ ಕೆಳಗೆ ಅಥವಾ ಕುರ್ಚಿಯ ಕೆಳಗೆ ಆಕಸ್ಮಿಕವಾಗಿ ಬಿಟ್ಟುಬಿಡುತ್ತೇನೆ. ನಂತರ ನನ್ನ ಸ್ನೇಹಿತರು ಏನೆಲ್ಲ ಹೇಳಿದ್ದಾರೆ ಎಂಬುದನ್ನು ಕೇಳುವುದರಲ್ಲಿ ನನಗೆ ಸಂತೋಷವಾಗುತ್ತದೆ.”




“ಮತ್ತು ಅವರು ಏನು ಹೇಳುತ್ತಾರೆ?” ಎಂದು ಟ್ವಿಸ್ಟಮ್ ಕೇಳಿದನು. “ಅದು ತುಂಬಾ ಆಸಕ್ತಿದಾಯಕವಾಗಿರಬೇಕು.”

“ಹೌದು. ನನಗೂ ಅದು ಇಷ್ಟು ಆಸಕ್ತಿದಾಯಕವಾಗಿರುತ್ತದೆ ಎಂಬ ಕಲ್ಪನೆಯೇ ಇರಲಿಲ್ಲ. ಆದರೆ ಕೊನೆಗೆ ಗೊತ್ತಾದದ್ದೇನೆಂದರೆ, ಅವರು ಏನನ್ನೂ ಹೇಳುವುದೇ ಇಲ್ಲ. ಯಾವುದೇ ಕಾರಣವಿಲ್ಲದೆ ಗಟ್ಟಿಯಾಗಿ ನಗುತ್ತಾರೆ, ಕೋಳಿಗಳಂತೆ ಕೂಗುತ್ತಾರೆ, ನಾಯಿಗಳಂತೆ ಬೊಗಳುತ್ತಾರೆ, ಗೊಣಗುತ್ತಾರೆ ಮತ್ತು ಹಸುಗಳಂತೆ ಹಂಬಾ ಎನ್ನುತ್ತಾರೆ ಹಾಗೂ ಬೆಕ್ಕುಗಳಂತೆ ಮ್ಯಾಂವ್ ಎನ್ನುತ್ತಾರೆ, ಆದರೆ ಅವರು ಏನನ್ನೂ ಹೇಳುವುದಿಲ್ಲ.”

“ಎಷ್ಟು ವಿಚಿತ್ರ!” ಎಂದ ಬೆಂಡಮ್.

“ಅಲ್ಲವೇ?” ಎಂದ ಸ್ಲಿಕ್. “ನಾನು ಅವರ ಜೊತೆಯಲ್ಲಿರುವವರೆಗೆ ಅವರು ಸಾಮಾನ್ಯ ಮೈಟ್‌ಗಳಂತೆ ಮಾತನಾಡುತ್ತಾರೆ, ಆದರೆ ನಾನು ಹೊರಟ ಕ್ಷಣವೇ ಈ ಅದ್ಭುತವಾದ ಶಬ್ದಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಇಲ್ಲಿ ಕಳೆದ ರಾತ್ರಿ ಮಾಡಿದ ಧ್ವನಿಮುದ್ರಣವನ್ನು ಕೇಳಿ.”

ಸ್ಲಿಕ್ ಉಪಕರಣದೊಳಗಿನ ಒಂದು ಡಿಸ್ಕ್ ತಿರುಗಿಸಿ ಬಟನ್ ಒತ್ತಿದನು. ಈ ಮೂವರು ಒಂದು ಉಚ್ಚರಿಸಿದ ಶಬ್ದವನ್ನು ಮತ್ತು ಬಾಗಿಲು ಮುಚ್ಚಿದಂತಿದ್ದ ಒಂದು ಭಾರೀ ಸಪ್ಪಳವನ್ನು ಕೇಳಿದರು.



ಇದಾದ ಬಳಿಕ ಒಂದು ಕ್ಷಣದ ಮೌನ, ಆ ಮೇಲೆ ನಗೆಯ ಗರ್ಜನೆಯಲ್ಲಿ ಕೊನೆಗೊಂಡಿತು. ಯಾರೋ ಹೇಳಿದರು: "ಮೇಜಿನ ಕೆಳಗೆ." ಕಾಲುಗಳನ್ನು ಸರಿದಾಡುಸುತ್ತಿರುವ ಸದ್ದು ಕೇಳಿಸಿತು. ಮತ್ತೊಂದು ಸುತ್ತಿನ ನಗು. ಬೊಗಳುವಿಕೆ, ಕೂಗುವ ಕೋಳಿಯ ಸದ್ದು, ಹಸುಗಳ ಹಂಬಾ. ಕುರಿಯ ಮೇಂ ಅನ್ನುವ ಸದ್ದು. ಯಾರೋ ಹೇಳಿದರು: "ನೋಡಿಲ್ಲಿ, ನಾನು ಕತ್ತೆಯಂತೆ ಕೂಗುತ್ತೇನೆ: ಹೀ ಹಾ! ಹೀ ಹಾ! ಹೀ ಹಾ!" ಕುದುರೆಯ ಧ್ವನಿ. ಇನ್ನಷ್ಟು ನಗು.

"ನೋಡಿದಿರಾ?.. ಅಥವಾ ಹೇಳುವುದಕ್ಕಿಂತ ಕೇಳಿದಿರಾ?" ಎಂದು ಸ್ಲಿಕ್ ತನ್ನ ಭುಜಗಳನ್ನು ಎತ್ತುತ್ತಾ ಹೇಳಿದನು.

"ಅದರಿಂದ ಒಂದು ಕಾದಂಬರಿ ಮಾಡುವುದು ಸ್ವಲ್ಪ ಕಷ್ಟ," ಎಂದ ಬೆಂಡಮ್.

"ಇಲ್ಲಿ ಯಾವುದೇ ರಹಸ್ಯವಿಲ್ಲ," ಎಂದು ಪ್ರೆಟ್ಜೆಲ್ ಸ್ಲಿಕ್‌ಗೆ ಹೇಳಿದನು. "ಈ ಹೊತ್ತಿಗೆ ಊರಿನಲ್ಲಿರುವ ಪ್ರತಿಯೊಬ್ಬರಿಗೂ ನಿನ್ನ ಯಂತ್ರದ ಬಗ್ಗೆ ಗೊತ್ತಾಗಿದೆ, ಆದ್ದರಿಂದ ನೀನು ಮನೆಗೆ ಹೋದ ಕೂಡಲೇ ಅವರು ಅದರೊಳಗೆ ಎಲ್ಲ ರೀತಿಯ ಅಸಂಬದ್ಧ ಮಾತುಗಳನ್ನು ಕೂಗುತ್ತಾರೆ."

"ಆದರೆ ಅವರು ಹಾಗೆ ಮಾಡಬೇಕಾದ ಕಾರಣವೇನು?"

"ನೀನು ಅವರನ್ನು ಮೋಸಗೊಳಿಸಬೇಕೆಂದಿದ್ದೆ, ಆದರೆ ಅವರು ಬದಲಿಗೆ ನಿನ್ನನ್ನೇ ಅವರು ಮೋಸಗೊಳಿಸಿದರು. ಅದು ಅವರ ಚಿಕ್ಕ ತಮಾಷೆ."



ಸ್ಲಿಕ್ ಹುಬ್ಬುಗಂಟು ಹಾಕಿ ಸುಮ್ಮನಾದನು.
"ಹಾಗಿದ್ದರೆ ಇದೇ ನಡೆಯುತ್ತಿರುವುದು! ಸರಿ, ಇನ್ನು ನಾನು ಅವರಿಗಿಂತ ಮೇಲುಗೈ ಸಾಧಿಸುತ್ತೇನೆ. ಅವರ ಕಿಟಕಿಗಳ ಕೆಳಗೆ ನನ್ನ ಹರಟೆಪೆಟ್ಟಿಗೆಯನ್ನು ಇಡುತ್ತೇನೆ. ಆ ಪುಟ್ಟ ಪೆಟ್ಟಿಗೆ ತನ್ನ ಬೆಲೆಯನ್ನು ಇನ್ನೂ ಸಾಬೀತುಪಡಿಸುತ್ತದೆ. ಆದರೆ ಇದನ್ನು ನೋಡಿ – ಇದು ಏನು ಎಂದು ನಿನಗೇ ಅನ್ನಿಸುತ್ತದೆ?" – ಎಂದು ಹೇಳುತ್ತಾ, ಮಡಚಿದ ದೊಡ್ಡ ಗಾತ್ರದ ಛತ್ರಿಯಂತೆ ಕಾಣುತ್ತಿದ್ದ ಒಂದು ಬೃಹತ್ ಪ್ಯಾಕೇಜ್‌ನತ್ತ ಬೆರಳು ತೋರಿಸಿದನು.
"ಇದು ಛತ್ರಿಯೇ?" ಎಂದು ಟ್ವಿಸ್ಟಮ್ ಕೇಳಿದನು.
"ಎಂದಿಗೂ ಅಲ್ಲ. ಇದು ಲೇಖಕರಿಗಾಗಿ ಇರುವ ಸುಲಭವಾಗಿ ಒಯ್ಯಬಹುದಾದ ಕುರ್ಚಿ ಮತ್ತು ಮೇಜು," ಎಂದು ಸ್ಲಿಕ್ ಹೇಳಿದನು. "ಒಬ್ಬ ಲೇಖಕನು ಕಾಡಿನ ವಿವರಣೆಯನ್ನು ಬರೆಯಲು ಬಯಸುತ್ತಾನೆ ಎಂದುಕೊಳ್ಳೋಣ. ಅವನು ಕಾಡಿಗೆ ಹೋಗಿ, ತನ್ನ ಮೇಜನ್ನು ತೆರೆದು, ಆರಾಮದಾಯಕವಾದ ಕುರ್ಚಿಯಲ್ಲಿ ಕುಳಿತು, ತಾನು ನೋಡುವ ಎಲ್ಲದರ ವಿವರಣೆಯನ್ನು ಬರೆಯುತ್ತಾನೆ. ಈ ಕುರ್ಚಿಯನ್ನು ಪ್ರಯತ್ನಿಸಿ ನೋಡು," ಎಂದು ಅವನು ಟ್ವಿಸ್ಟಮ್‌ಗೆ ಹೇಳಿದನು.



ಸ್ಲಿಕ್ ಛತ್ರಿಯ ಹಿಡಿಕೆಯಂತೆ ತೋರುತ್ತಿದ್ದ ಜಾಗದಲ್ಲಿ ಒಂದು ಬಟನನ್ನು ಒತ್ತಿದನು. ತಕ್ಷಣವೇ ಅದು ಒಂದು ಸಣ್ಣ ಮೇಜು ಮತ್ತು ಕುರ್ಚಿಯಾಗಿ ಮಾರ್ಪಟ್ಟಿತು. ಟ್ವಿಸ್ಟಮ್ ಕುರ್ಚಿಯಲ್ಲಿ ಕುಳಿತುಕೊಳ್ಳಲು ಕಷ್ಟಪಡಬೇಕಾಯಿತು.

"ಈಗ ನೀನು ಆರಾಮವಾಗಿದ್ದೀಯಲ್ಲ, ಖಂಡಿತವಾಗಿಯೂ ನಿನಗೆ ಒಂದು ಸ್ಫೂರ್ತಿ ದೊರೆಯುತ್ತದೆ," ಎಂದು ಸ್ಲಿಕ್ ಹೇಳಿದನು. "ಹುಲ್ಲಿನ ಮೇಲೆ ಅಥವಾ ಬರೀ ನೆಲದ ಮೇಲೆ ಕುಳಿತು ಬರೆಯುವುದಕ್ಕಿಂತ ಕುರ್ಚಿಯಲ್ಲಿ ಕುಳಿತು ಬರೆಯುವುದು ಸಾವಿರ ಪಟ್ಟು ಹೆಚ್ಚು ಆರಾಮದಾಯಕವೆಂದು ನೀನು ಒಪ್ಪುತ್ತೀಯಲ್ಲ."

ಟ್ವಿಸ್ಟಮ್‌ಗೆ ಆರಾಮವೂ ಆಗಲಿಲ್ಲ, ಸ್ಫೂರ್ತಿಯೂ ಬರಲಿಲ್ಲ. ಅವನ ಕಾಲಿನಲ್ಲಿ ಸೆಳೆತವಾಗುತ್ತಿರುವುದು ಮಾತ್ರ ಅವನಿಗೆ ಅನಿಸಿತು, ಆದ್ದರಿಂದ ಸಾಧ್ಯವಾದಷ್ಟು ಬೇಗ ವಿಷಯ ಬದಲಾಯಿಸಲು ನಿರ್ಧರಿಸಿದನು.

"ನೀನು ಯಾವ ಪುಸ್ತಕಗಳನ್ನು ಬರೆದಿದ್ದೀಯ?" ಎಂದು ಅವನು ಕುರ್ಚಿಯಿಂದ ತನ್ನನ್ನು ಬಿಡಿಸಿಕೊಳ್ಳುತ್ತಾ ಕೇಳಿದನು.

"ನಾನು ಇನ್ನೂ ಯಾವುದನ್ನೂ ಬರೆದಿಲ್ಲ," ಎಂದು ಸ್ಲಿಕ್ ಹೇಳಿದನು. "ಲೇಖಕನಾಗುವುದು ನೀನು ಅಂದುಕೊಳ್ಳುವಷ್ಟು ಸರಳವಲ್ಲ. ನಾನು ಲೇಖಕನಾಗುವ ಮೊದಲು, ಕಷ್ಟವಾಗಿದ್ದ ಹಲವಾರು ವಸ್ತುಗಳನ್ನು ನಾನು ಶೋಧಿಸಬೇಕಾಯಿತು. ಮೊದಲನೆಯದಾಗಿ, ಮಡಿಚಬಹುದಾದ ಮೇಜು ಮತ್ತು ಕುರ್ಚಿ ಸಿದ್ಧವಾಗುವವರೆಗೆ ಕಾಯಬೇಕಾಯಿತು. ಅದಕ್ಕೆ ವರ್ಷಗಳೇ ಬೇಕಾದವು. ನಂತರ ನಾನು ಹರಟೆಪೆಟ್ಟಿಗೆಗಾಗಿ ಕಾಯಬೇಕಾಯಿತು. ಕೆಲಸಗಾರರು ಕೆಲಸಗಳನ್ನು ಎಳೆಯುತ್ತಾ ಹೋಗಲು ಎಷ್ಟು ಇಷ್ಟಪಡುತ್ತಾರೆ ಎಂಬುದು ನಿಮಗೇ ಗೊತ್ತಲ್ಲ. ವಿಶೇಷವಾಗಿ ಟ್ಯಾಪ್ಸ್. ಏಕೆಂದರೆ, ಹರಟೆಪೆಟ್ಟಿಗೆ ಹೇಗೆ ತಯಾರಿಸಬೇಕು ಎಂದು ಯೋಚಿಸುವುದಕ್ಕೇ ಅವನಿಗೆ ಎರಡೂವರೆ ವರ್ಷಗಳು ಬೇಕಾದವು. ನಾನು ಕಾಯಬೇಕಾಯಿತು ಎಂಬುದರ ಬಗ್ಗೆ ಅವನಿಗೆ ಚಿಂತೆಯೇ ಇರಲಿಲ್ಲ! ಸೃಜನಾತ್ಮಕ ಪ್ರಯತ್ನದ ನೋವುಗಳನ್ನು ಅವನು ಅರ್ಥಮಾಡಿಕೊಳ್ಳಬಲ್ಲವನಂತೆ! ಹರಟೆಪೆಟ್ಟಿಗೆ ತುಂಬಾ ಜಟಿಲವಾದ ಸಾಧನವೆಂದು ನನಗೆ ತಿಳಿದಿದೆ, ಆದರೆ ಅವನು ಅದನ್ನು ಇನ್ನೂ ಹೆಚ್ಚು ಜಟಿಲಗೊಳಿಸಬೇಕಾದ ಕಾರಣವೇನು ಎಂಬುದು ನನಗೆ ತಿಳಿಯಲಿಲ್ಲ."

"ಅವನು ಹಾಗೇಕೆ ಮಾಡಿರಬಹುದು?" ಎಂದು ಬೆಂಡಮ್ ಕೇಳಿದನು.

"ಹೌದು, ಖಂಡಿತವಾಗಿಯೂ ಮಾಡಿದನು. ಸುಲಭವಾದ ಹರಟೆಪೆಟ್ಟಿಗೆ ಮಾಡುವ ಬದಲು, ಅದನ್ನು ವ್ಯಾಕ್ಯೂಮ್ ಕ್ಲೀನರ್‌ನೊಂದಿಗೆ ಜೋಡಿಸಿದನು. ವ್ಯಾಕ್ಯೂಮ್ ಕ್ಲೀನರ್‌ನಿಂದ ಈ ಜಗತ್ತಿನಲ್ಲಿ ನನ್ನದೇನು ಕೆಲಸ? ಅದಕ್ಕಾಗಿ ನನಗೆ ಇನ್ನೂ ಒಂದೂವರೆ ವರ್ಷ ಬೇಕಾಯಿತು. ಆದರೆ ಅದೀಗ ಮುಗಿದ ಅಧ್ಯಾಯ," ಎಂದು ಸ್ಲಿಕ್ ಕೈ ಬೀಸುತ್ತಾ ಹೇಳಿದನು, "ಈಗ ನನ್ನ ಬಳಿ ಹರಟೆಪೆಟ್ಟಿಗೆ ಇದೆ, ಮತ್ತು ನಾನು ಬರೆಯಲು ಪ್ರಾರಂಭಿಸುವ ಮೊದಲು ಇನ್ನೂ ಕೆಲವು ಸಣ್ಣಪುಟ್ಟ ವಸ್ತುಗಳನ್ನು ಸಂಗ್ರಹಿಸಬೇಕಾಗಿದೆ."

"ಲೇಖಕರಿಗಾಗಿ ಯಾರಾದರೂ ಯೋಚನೆ ಮಾಡುವ ಯಂತ್ರವನ್ನು ಕಂಡುಹಿಡಿದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂದು ಟ್ವಿಸ್ಟಮ್ ಹೇಳಿದನು.

“ಬಹಳ ಒಳ್ಳೆಯ ವಿಷಯ,” ಎಂದು ಸ್ಲಿಕ್ ಒಪ್ಪಿಕೊಂಡನು.
ಈ ಹೊತ್ತಿಗೆ ಸೂರ್ಯ ಮುಳುಗಲು ಪ್ರಾರಂಭಿಸಿದ್ದನು ಮತ್ತು ಈ ಮೂವರಿಗೆ ತಾವು ಹೊರಡುವ ಸಮಯವಾಗಿದೆ ಎಂದು ಅನಿಸಿತು.
ಅವರು ವಿದಾಯ ಹೇಳಿದರು, ಸೋಲ್ಡರಿಂಗ್ ಆಯರ್ನ ತೆಗೆದುಕೊಂಡು ಹೊರಗೆ ಹೋದರು.
“ಕತ್ತಲಾಗುವ ಮೊದಲು ಗ್ರೀನ್‌ವಿಲ್‌ಗೆ ತಲುಪಬೇಕೆಂದರೆ ನಾವು ಬೇಗ ಹೋಗಬೇಕು,” ಎಂದು ಬೆಂಡಮ್ ಹೇಳಿದನು.
“ಭಯಪಡಬೇಡಿ, ನಿಮ್ಮನ್ನು ಕ್ಷಣಾರ್ಧದಲ್ಲಿ ಅಲ್ಲಿಗೆ ತಲುಪಿಸುತ್ತೇನೆ,” ಎಂದು ಪ್ರೆಟ್ಜೆಲ್ ಹೇಳಿದನು. “ಆದರೆ ಮೊದಲು ನಾವು ಏನಾದರೂ ತಿನ್ನುವುದು ಒಳ್ಳೆಯದು ಎಂದು ನನಗನಿಸುತ್ತದೆ.”
ಮತ್ತು ಅವನು ಅವರನ್ನು ತನ್ನ ಮನೆಗೆ ಊಟಕ್ಕೆ ಕರೆದುಕೊಂಡು ಹೋದನು.

